



ವನ್ಯಜೀವಿ ವೀಕ್ಷಣೆ ಮತ್ತು ಛಾಯಾಗ್ರಹಣ ಮಾಡಿರುವ ನನಗೆ, ಈ ಕಾಡುಬೆಕ್ಕಿನ ದರ್ಶನ ಇದುವರೆಗೂ ದುರ್ಲಭವಾಗಿತ್ತು. ಇತ್ತೀಚೆಗೆ ಒರಿಸ್ಸಾ ರಾಜ್ಯಕ್ಕೆ ಹೋಗುವ ಅವಕಾಶ ಸಿಕ್ಕಿದಾಗ, ಈ ಬೆಕ್ಕಿನ ಬಗ್ಗೆ ಮಾಹಿತಿ ಕಲೆಹಾಕಿದ್ದೆ.

ಭುವನೇಶ್ವರ ವಿಮಾನ ನಿಲ್ದಾಣದಿಂದ ಸುಮಾರು ಮೂರು ಗಂಟೆ ರಸ್ತೆ ಪ್ರಯಾಣದ ನಂತರ ಬಿಟ್ಟಾರ್‌ಕಾನಿಕ ತಲುಪಿದೆ. ಬಿಟ್ಟಾರ್‌ಕಾನಿಕ ಒಂದು ವಿಶಿಷ್ಟ ಅಭಯಾರಣ್ಯ. ನದಿ, ಸಮುದ್ರ ಸೇರುವ ಪ್ರದೇಶ ಹಾಗೂ ಸಣ್ಣ ಗಿಡಮರಗಳಿಂದ ಕೂಡಿದ ಕುರುಚಲು ಕಾಡಿನಂತಿರುವ ಮ್ಯಾಂಗ್ರೋವ್ ಕಾಡಿದು. ನದಿಯ ಇಕ್ಕೆಲಗಳಲ್ಲಿ ಕಾಡು ಹಾಗೂ ಜೌಗು ಪ್ರದೇಶವಿದ್ದು, ಆ ಪರಿಸರ ವಿಶಿಷ್ಟ ಪ್ರಾಣಿ ಪಕ್ಷಿಗಳಿಗೆ ಆವಾಸಸ್ಥಾನವಾಗಿದೆ. ಅದು ಮತ್ಸ್ಯಾಹಾರಿ ಕಾಡು ಬೆಕ್ಕು ವಾಸಿಸುವ ಜಾಗವೂ ಹೌದು.

ಕಾಡುಬೆಕ್ಕು ಇರುವ ಜಾಗ ತಲುಪಬೇಕಾದರೆ ಕನಿಷ್ಠ ಎರಡು ಗಂಟೆಗಳ ಕಾಲ ದೋಣಿಯಲ್ಲಿ ಸಾಗಬೇಕು ಮತ್ತು ಕತ್ತಲಾದ ನಂತರವೇ ಬೆಕ್ಕಿನ ಹುಡುಕಾಟ ನಡೆಸಬೇಕು.

ಕಗ್ಗತ್ತಲಲ್ಲಿ ಟಾರ್ಚ್ ಬೆಳಕಿನ ಸಹಾಯದಿಂದ ಕಾಡು–ನೀರಂಚಿನ ಪ್ರದೇಶದಲ್ಲಿ ನಮ್ಮ ಹುಡುಕಾಟ ಆರಂಭವಾಯಿತು. ರಾತ್ರಿ ಎಂಟು ಗಂಟೆಯವರೆಗೂ ಬೆಕ್ಕಿನ ಸುಳಿವು ಸಿಗಲಿಲ್ಲ. ಅಷ್ಟರಲ್ಲಿ ನಮ್ಮ ಸಹಾಯಕ ಪಿಸುಮಾತಿನಲ್ಲಿ, 'ಅಲ್ಲಿ ನೋಡಿ?' ಅಂದ. ಕ್ಷಣಮಾತ್ರದಲ್ಲಿ, ಬೆಕ್ಕು ಕಾಣಿಸಿಕೊಂಡು ಮಾಯವಾಯಿತು! ನಂತರದ ಒಂದು ಗಂಟೆಯ ಕಾಲ, ಒಂದೆರಡು ಮೈಲು ದೂರದವರೆಗೂ ಹುಡುಕಾಟ ನಡೆಸಿದರೂ ಆ ಪ್ರಾಣಿಯ ಸುಳಿವು ಸಿಗಲಿಲ್ಲ. ನಿರಾಶೆ ಆವರಿಸಿತು. ಆದರೆ, ಅನಿರೀಕ್ಷಿತವಾಗಿ ಮತ್ತೊಂದು ಜಾಗದಲ್ಲಿ ಕಾಡುಬೆಕ್ಕಿನ ದರ್ಶನಭಾಗ್ಯ ಲಭಿಸಿದಾಗ ನಮ್ಮ ಆನಂದಕ್ಕೆ ಪಾರವೇ ಇರಲಿಲ್ಲ!

ಟಾರ್ಚಿನ ಮಂದ ಬೆಳಕಿನಲ್ಲಿ, ಸುಂದರವಾದ ಮತ್ಸ್ಯಬಾಕನನ್ನು ನೋಡಿದೆವು. ನಮ್ಮ ಇರುವಿಕೆಯಿಂದ ಅದಕ್ಕೆ ತೊಂದರೆ ಅನಿಸಲಿಲ್ಲವೇನೊ? ಅದು ನಮ್ಮನ್ನು ನೋಡಿ ವಿಚಲಿತವಾಗಲಿಲ್ಲ. ನಾವು ಸ್ವಲ್ಪ ದೂರದಿಂದಲೇ ಅದರ ಚಲನವಲನಗಳನ್ನು ವೀಕ್ಷಿಸುತ್ತಾ ನಿಧಾನವಾಗಿ ನೀರಿನ ಅಂಚಿನಲ್ಲಿ ಅದನ್ನು ಹಿಂಬಾಲಿಸಿದೆವು. ಒಂದು ಸಾರಿ ಆ ಬೆಕ್ಕು ನಿಂತು, ನಮ್ಮ ಕಡೆ ತೀಕ್ಷ್ಣ ನೋಟ ಬೀರಿತು. ಅದರ ರೂಪುರೇಷೆಗಳು ಚೆನ್ನಾಗಿ ಗೋಚರವಾದವು.

ಕಾಡುಬೆಕ್ಕು ನೋಡಲು ಗಾತ್ರದಲ್ಲಿ ನಮ್ಮ ನಾಡಬೆಕ್ಕಿಗಿಂತ ಎರಡು ಪಟ್ಟು ದೊಡ್ಡದು. ಕಂದು ಬಣ್ಣ, ದಷ್ಟಪುಷ್ಟವಾದ ದೇಹ, ಚಿಕ್ಕ ಬಾಲ, ಗಿಡ್ಡ ಕಾಲುಗಳಿದ್ದು, ಮೈ ತುಂಬಾ ಪಟ್ಟೆಗಳಿವೆ. ಅದರ ಮುಖದಲ್ಲಿ ಎರಡು ಕಡೆ ಪಟ್ಟೆಗಳು ಕಣ್ಣಂಚಿನಿಂದ ಕುತ್ತಿಗೆಯವರೆಗೂ ಸ್ಪಷ್ಟವಾಗಿ ಕಂಡವು. ಆ ನಿಶಾಚರಿ ತಡರಾತ್ರಿಯಲ್ಲಿ ಸಂಚರಿಸುತ್ತಾ, ನೀರಿನ ಅಂಚಿನಲ್ಲಿ ತನ್ನ ಆಹಾರ (ಮೀನು) ಹುಡುಕುತ್ತಾ ನಡೆದಿತ್ತು. ಸ್ವಲ್ಪ ಹೊತ್ತು ಕೂತು, ಆಕಳಿಸಿ, ಮುಂದೆ ಸಾಗಿ ಜಿಗಿದು ದಾಟುವ ದೃಶ್ಯ, ಇವೆಲ್ಲವನ್ನು ನಮ್ಮ ಆಧುನಿಕ ತಂತ್ರಜ್ಞಾನವುಳ್ಳ ಕ್ಯಾಮೆರಾದಲ್ಲಿ ಸೆರೆಹಿಡಿಯಲು ಸಾಧ್ಯವಾಯಿತು.

ಕಾಡುಬೆಕ್ಕಿನ ದರ್ಶನದವಾದ ಮೇಲೆ, ಮತ್ತೆ ದೋಣಿ ಪಯಣದದೊಂದಿಗೆ ಗಮ್ಯ ತಲುಪಿದೆವು. ದೋಣಿಯಿಂದ ಇಳಿದು ಹೋಗುವಾಗ ನಮಗೆ, ದಡದಲ್ಲಿ ಆಕಸ್ಮಿಕವಾಗಿ ವಿರಮಿಸುವ ಅಪಾಯಕಾರಿ ಉಪ್ಪುನೀರಿನ ಮೊಸಳೆ ಬಗ್ಗೆ ಸೂಚನೆ–ಎಚ್ಚರಿಕೆ ದೊರಕಿತು. ಆ ಆಕ್ರಮಣಕಾರಿ ಮೊಸಳೆ ಮನುಷ್ಯನನ್ನು ಭಕ್ಷಿಸಿದ ಉದಾಹರಣೆಗಳಿವೆ. ಅಲ್ಲಿನ ಮೀನುಗಾರರು ಕೂಡ ಆ ಮೊಸಳೆಯ ಬಗ್ಗೆ ವಿಶೇಷ ಜಾಗರೂಕತೆ ವಹಿಸುತ್ತಾರೆ. ಆ ಮೊಸಳೆ ದರ್ಶನ ಕಾಡುಬೆಕ್ಕಿನ ಭೇಟಿಯ ಘಟನೆಯನ್ನು ಮತ್ತಷ್ಟು ಅವಿಸ್ಮರಣೀಯವಾಗಿಸಿತು.

ಪ್ರತಿಕ್ರಿಯಿಸಿ: feedback@sudha.co.in




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ, ಪಂಚ ಮಹಾ ಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ಮದುವೆ, ಸಂತಾನ, ದಾಂಪತ್ಯ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ, ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಇನ್ನಿತರ ನಿಮ್ಮ ಯಾವುದೇ ಕಠಿಣ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

9880444450